SRI K. H. PATIL (Minister for Food and Forests).—

(*a*) Yes,

(*b*) 550 acres of plantation work will be taken up during 1977-78. For this the advance trenching work has been taken up during 1976-77.

(*c*) Forest development work will be taken up each year from 1977-78.

ಶ್ರೀ ಎನ್. ಬಸವಯ್ಯ.—ಚಿಕ್ಕನಾಯಕನಹಳ್ಳಿ ಕಸಬಾ ಹೋಬಳಿ ಸುತ್ತಲೂ ಕಾಡು ಹಾಳಾಗಿ ಹೋಗಿದೆಯೇ ಎಂದು ಕೇಳಿರುವುದಕ್ಕೆ ಉತ್ತರವಾಗಿ ಹೌದು ಎಂದು ಹೇಳಿರುತ್ತೀರಿ. ಎಷ್ಟು ಎಕರೆಗಳಷ್ಟು ಅರಣ್ಯ ಹಾಳಾಗಿರುತ್ತದೆಂಬುದನ್ನು ತಿಳಿಸುತ್ತೀರಾ ?

† ಶ್ರೀ ಕೆ. ಎಚ್. ಪಾಟೀಲ್.—ಸುಮಾರು 17,764 ಎಕರೆಗಳಷ್ಟು ಕಾಡು ಇತ್ತು. ಇದರಲ್ಲಿ ಎಷ್ಟು ಹಾಳಾಗಿರುತ್ತದೆ, ಎಷ್ಟು ಇರುತ್ತದೆ ಎಂಬುದನ್ನು ಹೇಳುವುದಕ್ಕೆ ಬರುವುದಿಲ್ಲ. ಕಾಡು ಹಾಳಾಗಿರುವ ಕಡೆ ಮತ್ತೆ ಹೊಂಗೆ ಬೇವು, ಬೂರುಗ ಇವೇ ಮುಂತಾದ ಮರಗಳನ್ನು ಬೆಳೆಸಲೂ ಕೂಡ ಸಾಕಷ್ಟು ಪ್ರಯತ್ನ ಮಾಡಿದ್ದೇವೆ.

ಶ್ರೀ ಎನ್. ಬಸವಯ್ಯ.—ಕಡಿದ ಕಾಡು ಜಾಸ್ತಿ ಇದ್ದು ಅದನ್ನು ಪುನರ್ ವ್ಯವಸ್ಥೆಗೊಳಿಸಲು ಕೊಟ್ಟಿರತಕ್ಕಂಥ ಕಾಡು 550 ಎಕರೆಗಳೆಂದು ಹೇಳಿದ್ದೀರಿ, ಇದು ಬಹಳ ಕಡಿಮೆ ಇರುವುದರಿಂದ ಈ ಒಂದು ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚಿನ ಪ್ರದೇಶವನ್ನು ಮಂಜೂರು ಮಾಡಿ ಹೆಚ್ಚು ಕಾಡನ್ನು ಬೆಳೆಯುವ ವ್ಯವಸ್ಥೆಯನ್ನು ಮಾಡುತ್ತೀರಾ ?.

ಶ್ರೀ ಕೆ ಎಚ್. ಪಾಟೀಲ್.—ಮಾನ್ಯ ಸದಸ್ಯರು ಹೆಚ್ಚು ಪ್ರದೇಶವನ್ನು ಮಂಜೂರು ಮಾಡಿ ಕಾಡನ್ನು ಬೆಳೆಸುವ ಬಗ್ಗೆ ಮಂಡಿಸಿರುವ ಪಾದಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ, ಇದನ್ನು ತೀವ್ರವಾಗಿ ಪರಿಶೀಲಿಸುತ್ತೇನೆ. ಮತ್ತು ಹಾಲಿ ಇರುವ ಕಾಡನ್ನು ಹಾಳುಮಾಡಬಾರದೆಂದು ಎಲ್ಲ ಸದಸ್ಯರಲ್ಲಿಯೂ ಪ್ರಾರ್ಥಿಸಿ ಕೊಳ್ಳುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಎಷ್ಟು ಎಕರೆಗಳಷ್ಟು ಜಮೀನನ್ನು ಪ್ಲೈನ್ಸ್‌ಗೋಸ್ಕರವಾಗಿ ಮತ್ತು ಎಷ್ಟು ಎಕರೆಗಳಷ್ಟು ಜಮೀನನ್ನು ಸಾಗುವಳಿಗಾಗಿ ಕೊಟ್ಟಿರುತ್ತೀರಿ, ಮತ್ತು ಎಷ್ಟು ಏಕರೆಗಳಷ್ಟು ಕಾಡು ಇರುತ್ತದೆಂದು ದಯವಿಟ್ಟು ತಿಳಿಸಬೇಕು ?

ಶ್ರೀ ಕೆ. ಎಚ್. ಪಾಟೀಲ್ —17,765 ಎಕರೆಗಳಷ್ಟು ಮಾತ್ರ ಕಾಡು ಇರುತ್ತದೆ. ಮಿಕ್ಕ ಪ್ರಶ್ನೆಗಳಿಗೆ ಯಾವು ಯಾವುದು ಎಷ್ಟೆಷ್ಟು ಎಕರೆಗಳಿವೆ ಎನ್ನುವುದಕ್ಕೆ ನನ್ನಲ್ಲಿ ಅಂಕಿಸಂಖ್ಯೆಗಳು ಇಲ್ಲ. ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಕೊಡಲು ಸಾಧ್ಯ.

Lift Irrigation schemes in Kollegal Taluk

354. SRI M. SIDDAMADAIAH (Kollegal).—Will the Minister of State for Minor Irrigation and Protocol be pleased to state:—

(*a*) whether the Government had received any representation to take up Lift Irrigation near old bridge of Shivanasamudra in Kollegal Taluk ;

(*b*) if so, whether the Government intend to start the work early ?

SRI H. C. SRIKANTAIAH (Minister of State for Minor Irrigation and Protocol).—

(*a*) Yes,

(*b*) The scheme is still under consideration.

ಶ್ರೀ ಎಂ. ಸಿದ್ದವಾಡಯ್ಯ.—ಕೊಳ್ಳೇಗಾಲ ತಾಲ್ಲೂಕು ಶಿವನಮುದ್ರದ ಹಳ್ಳೀ ಸೀತುವೆಯು ಬಳಿ ಲಿಫ್ಟ್ ಇರಿಗೇಷನ್ ಸಾಕಾವ ಬಗ್ಗೆ ಸರಕಾರವವರಿಗೆ ಮನವಿ ಬಂದಿದೆಯೇ ಎಂದು ಕೇಳಿರುವುದಕ್ಕೆ ಮನವಿ ಬಂದಿರುತ್ತದೆಂದು ತಿಳಿಸಿದ್ದೀರಿ. ಅದು ಯಾವಾಗ ಬಂದಿರುತ್ತದೆ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

† ಶ್ರೀ ಎಚ್. ಸಿ. ಶ್ರೀಕಾಂತಯ್ಯ —ಮನವಿ ಬಂದಿರುತ್ತದೆಯೇ ಎಂದು ಕೇಳಿರುತ್ತೀರಿ ಅದಕ್ಕೆ ಉತ್ತರದಲ್ಲಿ ಬಂದಿರುತ್ತದೆಂದು ಹೇಳಿರುತ್ತೇನೆ. ಯಾವಾಗ ಬಂದಿತು ಎಂದು ಕೇಳಿದ್ದರೆ ತಿಳಿಸುತ್ತಿದ್ದೆ.

ಶ್ರೀ ಎಂ. ಸಿದ್ದವಾಡಯ್ಯ.—ಮನವಿ ಬಂದು ಎಷ್ಟು ದಿವಸವಾಯಿತು ? ಹೀಗೆ ಬಂದಿದ್ದರೂ ಕೂಡ ಇನ್ನೂವರೆಗೆ ಯಾವ ಕಾರ್ಯವೂ ಆಗದಿರುವುದಕ್ಕೆ ಕಾರಣವೇನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ ಈಗ ಸದಸ್ಯರು ಏನಾಗಬೇಕು ಎನ್ನುವುದನ್ನು ಸ್ಪಷ್ಟವಾಗಿ ಕೇಳುತ್ತಿಲ್ಲ. ಆದರೂ ಇದರ ಬಗ್ಗೆ ಅಂದಾಜು ತಯಾರು ಮಾಡಿದ್ದೇವೆ. ವಿವರವಾದ ಪರಿಶೀಲನೆ ಆಗುತ್ತಾ ಇದೆ. 1977-78ನೇ ಸಾಲಿನ ಬಜೆಟಿನಲ್ಲಿ ಇದನ್ನು ಸೇರಿಸಲು ಸಾಧ್ಯವಾಗಲಿಲ್ಲ. ಹರಿಜನ, ಹಿಂದುಳಿದ ಪಂಗಡದವರಿಗೆ ಈ ಒಂದು ಸ್ಕೀಮ್‌ನಿಂದ ಅನುಕೂಲವಾಗುತ್ತದೆಂದು ವರದಿ ಕೂಡ ಬಂದಿರುತ್ತದೆ. ಈ ಎಲ್ಲ ದೃಷ್ಟಿಯಿಂದಲೂ ಈ ಒಂದು ಕಾರ್ಯವನ್ನು ಮಾಡಲು ತೀವ್ರಗಮನವನ್ನು ಕೊಡಲಾಗುತ್ತದೆ.

ಶ್ರೀ ಎಂ. ಸಿದ್ಧಮಾದಯ್ಯ. —ಈ ಪ್ರದೇಶದಲ್ಲಿ ಮಳೆ ಇಲ್ಲದೆ ಬೆಳೆ ಇಲ್ಲದೆ ಜನರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ದಯವಿಟ್ಟು ಲಿಫ್ಟ್ ಇರಿಗೇಷನ್ ಆದಷ್ಟು ಜಾಗ್ರತೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿ. ಶ್ರೀ ಕಂಠಯ್ಯ.—ಇದರ ಬಗ್ಗೆ ಎಲ್ಲ ತರಹದ ಕಾರ್ಯಕ್ರಮವನ್ನು ಈಗಾಗಲೇ ಮಾಡುತ್ತಿದ್ದೇವೆ ವಿವರವಾದ ಪರಿಶೀಲನೆ ನಡೆಯುತ್ತಿದೆ. ಹಿಂದುಳಿದ ಪಂಗಡದವರಿಗೆ ಹರಿಜನರಿಗೆ ಬಹಳ ಉಪಯೋಗವಾಗತಕ್ಕಂಥ ಸ್ಕೀಮ್ ಆಗಿದೆಯೆಂದೂ ಕೂಡ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಶ್ರೀ ಎಂ ಸಿದ್ದವಾಡಯ್ಯ —ಆದಷ್ಟು ಜಾಗ್ರತೆ ಎಂದು ಹೇಳಿದರೆ ಎಷ್ಟು ದಿವಸಗಳಲ್ಲಿ ಈ ಕಾರ್ಯವನ್ನು ಮುಗಿಸುತ್ತೀರಾ ಸ್ವಾಮಿ.

ಶ್ರೀ ಎಚ್. ಸಿ. ಶ್ರೀಕಂಠಯ್ಯ —ಆದಷ್ಟು ಜಾಗ್ರತೆ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಅನೇಕ ಕಡೆ ಸಣ್ಣ ಕೆರೆಗಳಿಂದ ಲಿಫ್ಟ್ ಇರಿಗೇಷನ್ ಆಗತಕ್ಕಂಥ ಕೆಲಸ ಇದೆ ಎಂದು ಮನವಿಗಳನ್ನು ಕಳುಹಿಸಿಕೊಡುತ್ತಲೇ ಇದ್ದಾರೆ, ಇದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತಿದೆ, ಈ ಕಾರ್ಯವನ್ನು ಆದಷ್ಟು ಜಾಗ್ರತೆ ಮುಗಿಸಿಕೊಡುತ್ತೇವೆಂದು ಹೇಳುತ್ತಲೇ ಇರುತ್ತಾರೆ. ಆದರೆ ಪರಿಶೀಲನೆ ಮಾಡತಕ್ಕಂಥ ಸಿಬ್ಬಂದಿ ಬಹಳ ಕಡಿಮೆ ಇದ್ದಾರೆ, ಇದನ್ನು ಜಾಸ್ತಿಮಾಡಿ ಎಂದು ಸದಸ್ಯರು ಹೇಳುತ್ತಲೇ ಇರುತ್ತಾರೆ, ಅವರು ಆ ರೀತಿ ಅರ್ಜಿ ಬರೆದು ಕೇಳುವುದಕ್ಕೆ ಬದಲಾಗಿ ಒಂದು ವ್ಯಾಪಕವಾದ ಯೋಜನೆಯನ್ನು ಹಾಕಿಕೊಂಡು ಪರಿಶೀಲನೆ ಮಾಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರದವರು ಏತಕ್ಕೆ ಮಾಡಬಾರದೆಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಎಲ್ಲ ಕಾರ್ಯಕ್ರಮವನ್ನು ಮಾಡುತ್ತಾ ಇದ್ದೇವೆ. ಶ್ರೀ ಬೈರಪ್ಪಾಜಿಯವರ ಕಡೆ ಎಷ್ಟು ಕಾರ್ಯಗಳನ್ನು ಮಾಡಿದರೂ ಕೂಡ ಅವರಿಗೆ ತೃಪ್ತಿಯಾಗುತ್ತಿಲ್ಲ. ಅವರ ತಾಲ್ಲೂಕಿನಲ್ಲಿ ಕ್ಷಾಮ ಇದೆ, ಆದ್ದರಿಂದ ಸಣ್ಣ ನೀರಾವರಿ ಕಾರ್ಯವನ್ನು ಈಗಾಗಲೇ ಬೇಕಾದಷ್ಟು ತೆಗೆದುಕೊಂಡಿದ್ದೇವೆ. ಇದೆಲ್ಲವನ್ನು ಪೂರ್ತಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಹೇಳುತ್ತಿರುವುದೇನೆಂದರೆ ಮನವಿಗಳನ್ನು ಕೊಟ್ಟಿದ್ದಾಗ್ಯೂ ಕೂಡ ಕೆಲಸಗಳು ಆಗುತ್ತಾ ಇಲ್ಲ. ಅರ್ಜಿಗಳು ಕೊಡುವುದಕ್ಕೆ ಬದಲಾಗಿ ತಾವೇ ಪ್ರತಿಯೊಂದು ತಾಲ್ಲೂಕಿನಲ್ಲಿ ನಮಗ್ರವಾಗಿ ಪರಿಶೀಲನೆ ಮಾಡಿ ನೀರಾವರಿ ಕಾಮಗಾರಿಗಳನ್ನು ಮುಗಿಸುವ ಬಗ್ಗೆ ಆಲೋಚನೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ಇದರ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ.

Building Fund collection by Chickballapur Municipal College.

23. SRI C. V. VENKATARAYAPPA (Chickballapur).—Will the Minister for Municipal Administration and Political Pensions be pleased to state:—

(*a*) whether it is a fact tickets of various denominations were got printed by the Chickballapur Municipal College, for collecting donations for building fund from the students of Municipal College, Sri M. V. Municipal Evening College Municipal Teachers' Trainining Institute, Municipal College of Pharmacy and Municipal College of Education ; if so, the number of tickets, denomination wise got printed ;

(*b*) whether the Principal, Municipal College has issued tickets to any of the institutions mentioned in clause (a) for collecting donations from the students of such institutions ; if so, the names of the tickets institutions and the tickets issued, denomination wise ;

(*c*) if so, the total amount collected from the Students ;

(*d*) the amount paid to each of the institutions by the Prinicipal out of the amount collected ;

(*e*) the amount collected by the Principal, Municipal College, as donation from the public, (tickets issued denominationwise and the names of such persons may be furnished) ;

(*f*) whether the Principal, Municipal College, Chickballapur has entrusted any other person with the collection of donations from the public ; if so, the number of tickets (with denominations) given to such persons and the collections made thereof ;

(*g*) the number of un-issued tickets (denomination-wise) in possession of concerned authority ?